ಓ.ಎಸ್. ನಂಃ 22/2017

**ಡಿ.ಡಬ್ಲ್ಯೂಃ 1**

**ದಿನಾಂಕ 19.08.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿಯ ಪರ ಃ ಶ್ರೀ.ಎಮ್.ಸಿ.ಎಸ್. ವಕೀಲರಿಂದಃ**

1. 2011 ರಿಂದ ನನಗೆ ವಾದಿಯಾದ ಕಾಳೇಗೌಡರ ಪರಿಚಯವಿದೆ. ನಿಮಗೆ ಕೇವಲ ವಾದಿಯಾದ ಕಾಳೇಗೌಡರ ಜೊತೆ ಮಾತ್ರ ವ್ಯವಹಾರವಿತ್ತು ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು 2011 ರಲ್ಲಿ ನಾವು ವಾದಿಯಾದ ಕಾಳೇಗೌಡರಿಂದ 2 ಲಕ್ಷ ರೂಪಾಯಿ ಹಣವನ್ನು ಸಾಲವಾಗಿ ಪಡೆದು ಅವರಿಗೆ ಸದರಿ ಸಾಲವನ್ನು ಮರುಪಾವತಿ ಮಾಡಿರುತ್ತೇವೆ ಎಂದು ನುಡಿದಿರುತ್ತಾರೆ. ಈ ದಾವೆಯನ್ನು ವಾದಿಯಾದ ಕಾಳೇಗೌಡರು ನಮ್ಮ ವಿರುದ್ಧ ಹೂಡಿರುತ್ತಾರೆ ಎಂದರೆ ಸರಿ. ವಾದಿಯಾದ ಕಾಳೇಗೌಡರು ಮರಣ ಹೊಂದಿದ ನಂತರ ಅವರ ವಾರಸುದಾರರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಲಾಗಿರುತ್ತದೆ ಎಂದರೆ ಸರಿ. ವಾದಿಯಾದ ಕಾಳೇಗೌಡರ ವಾರಸುದಾರರ ಜೊತೆ ನಾವು ಎಂದಿಗೂ ಸಹ ಯಾವುದೇ ರೀತಿಯ ವ್ಯವಹಾರವನ್ನು ಮಾಡಿರುವುದಿಲ್ಲ ಎಂದರೆ ಸರಿ.

2. ನಿಪಿ.3 ರಲ್ಲಿರುವ ತಮ್ಮ ಹಾಗೂ ಉಳಿದ ಪ್ರತಿವಾದಿಯರ ಸಹಿಯನ್ನು ಸಾಕ್ಷಿಯು ನೋಡಿ ಗುರತಿಸಿರುತ್ತಾರೆ. ಮುಂದುವರೆದು ನಿಪಿ.3 ರಲ್ಲಿ ತಮ್ಮ ಹಾಗೂ ಉಳಿದ ಪ್ರತಿವಾದಿಯರ ಸಹಿಯನ್ನು ನಮ್ಮಿಂದ ಹೇಗೆ ಪಡೆದುಕೊಂಡಿರುತ್ತಾರೆ ಎಂದು ನಮಗೆ ಗೊತ್ತಿಲ್ಲ ಆದರೆ 2011 ರಲ್ಲಿ ನಾವು ವಾದಿಯಾದ ಕಾಳೇಗೌಡರಿಂದ ಸಾಲವನ್ನು ಪಡೆದಿದ್ದಾಗ ಕಾಳೇಗೌಡರು ನಮ್ಮಿಂದ ನಾಲ್ಕು ಛಾಪಾ ಕಾಗದಗಳಲ್ಲಿ ಸಹಿಯನ್ನು ಪಡೆದಿದ್ದರು ಎಂದು ಸ್ವತಃ ನುಡಿದಿರುತ್ತಾರೆ.

3. ವಾದಿಯಾದ ಕಾಳೇಗೌಡರು ಅವಿದ್ಯಾವಂತರಾಗಿದ್ದು, ಅವರು ತಮ್ಮ ಹೆಬ್ಬೆಟ್ಟನ್ನು ಹಾಕುತ್ತಿದ್ದರು ಎಂದರೆ ಸರಿ. ನಾನು 4 ನೇ ತರಗತಿಯವರೆಗೆ ವಿದ್ಯಾಭ್ಯಾಸವನ್ನು ಮಾಡಿರುತ್ತೇನೆ. 3 ನೇ ಪ್ರತಿವಾದಿಯು ಹತ್ತನೇಯ ತರಗತಿಯವರೆಗೆ ವಿದ್ಯಾಭ್ಯಾಸವನ್ನು ಮಾಡಿರುತ್ತಾರೆ. 3 ನೇ ಪ್ರತಿವಾದಿಗೆ ಓದಲು ಮತ್ತು ಬರೆಯಲು ಬರುತ್ತದೆ ಅದರೆ

3 ನೇ ಪ್ರತಿವಾದಿಗೆ ವ್ಯವಹಾರಿಕ ಜ್ಞಾನ ಇರುವುದಿಲ್ಲ. ನನಗೆ ವ್ಯವಹಾರಿಕ ಜ್ಞಾನ ಇದೆ ಎಂದರೆ ಸರಿ. ನನಗೆ ಸರಿಯಾಗಿ ಕನ್ನಡ ಭಾಷೆ ಓದಲು ಮತ್ತು ಬರೆಯಲು ಬರುವುದಿಲ್ಲ ಆದರೆ ಅಲ್ಪ ಸ್ವಲ್ಪ ಓದಲು ಬರುತ್ತದೆ. ಸಾಕ್ಷಿಗೆ ಈಗ ನಿಪಿ.3 ರ ದಾಖಲೆಯನ್ನು ತೋರಿಸಿ ಅದನ್ನು ಓದಲು ಹೇಳಿದ್ದು, ಸಾಕ್ಷಿಯು ತನಗೆ ಸದರಿ ದಾಖಲೆಯನ್ನು ಸರಿಯಾಗಿ ಓದಲು ಬರುವುದಿಲ್ಲ ಎಂದು ನುಡಿದಿರುತ್ತಾರೆ.

4. ನಾನು ಬೆಟ್ಟದಪುಟದಲ್ಲಿರುವ ಸರ್ಕಾರಿ ಶಾಲೆಯಲ್ಲಿ 4 ನೇ ತರಗತಿಯವರೆಗೆ ವಿದ್ಯಾಭ್ಯಾಸವನ್ನು ಮಾಡಿರುತ್ತೇನೆ. 1 ನೇ ಪ್ರತಿವಾದಿಯ ತವರು ಮನೆಯು ಬೆಟ್ಟದಪುರದ ಬಳಿ ಇರುವ ಚಿಕ್ಕಮಳಲಿಯಲ್ಲಿ ಇರುತ್ತದೆ. ನಾನು ಕೇವಲ 4 ನೇ ತರಗತಿಯವರೆಗೆ ಮಾತ್ರ ವಿದ್ಯಾಭ್ಯಾಸವನ್ನು ಮಾಡಿರುತ್ತೇನೆ ಎಂದು ನ್ಯಾಯಾಲಯದಲ್ಲಿ ಪ್ರಮಾಣ ಪತ್ರ ಸಲ್ಲಿಸಬಲ್ಲೆ. 4 ನೇ ತರಗತಿಗಿಂತ ಹೆಚ್ಚಾಗಿ ನಾನು ಬೇರೆ ಯಾವುದೇ ಶಾಲೆಯಲ್ಲಿ ವಿದ್ಯಾಭ್ಯಾಸವನ್ನು ಮಾಡಿರುವುದಿಲ್ಲ. ನಾನು 4 ನೇ ತರಗತಿಗಿಂತ ಹೆಚ್ಚಾಗಿ ವಿದ್ಯಾಭ್ಯಾಸ ಮಾಡಿದ್ದರು ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ.

5. ವಾದಿಯು ನಮ್ಮ ವಿರುದ್ಧ ಈ ಸುಳ್ಳು ದಾವೆಯನ್ನು ಹೂಡಿರುತ್ತಾರೆ ಎಂದು ನಾವು ಅವರ ವಿರುದ್ಧ ಯಾವುದೇ ಕಾನೂನು ಕ್ರಮ ಕೈಗೊಂಡಿರುವುದಿಲ್ಲ ಆದರೆ ವಾದಿಯಾದ ಕಾಳೇಗೌಡರ ಮಗನಾದ ಸೋಮಶೇಖರ ಹಾಗೂ ಕಾಳೇಗೌಡರ ಮಗಳಾದ ಗಾಯತ್ರಿರವರ ಮಗನಾದ ಮಹದೇವ ಎನ್ನುವವರ ವಿರುದ್ಧ ನಾವು ಸಾಲಿಗ್ರಾಮ ಪೋಲಿಸ್ ಠಾಣೆಯಲ್ಲಿ ದೂರನ್ನು ನೀಡಿರುತ್ತೇವೆ. ಈ ದಾವೆಯ ಸಮನ್ಸ್ ಬಂದ ನಂತರದಲ್ಲಿಯು ಸಹ ನಾವು ವಾದಿಯಾದ ಕಾಳೇಗೌಡರ ವಿರುದ್ಧ ಯಾವುದೇ ಕಾನೂನು ಕ್ರಮ ಕೈಗೊಂಡಿರುವುದಿಲ್ಲ.

6. ದಿನಾಂಕ 13.01.2014 ರಂದು ನಾವು ವಾದಿಯಾದ ಕಾಳೇಗೌಡರಿಂದ 1,60,000/- ರೂಪಾಯಿ ಹಣವನ್ನು ಸಾಲವಾಗಿ ಕೊಡುವಂತೆ ಕೇಳಿರುತ್ತೇವೆ ಎಂದರೆ ಸರಿಯಲ್ಲ. ವಾದಿಯಾದ ಕಾಳೇಗೌಡರಲ್ಲಿ ಸದರಿ ದಿನದಂದು ಅಷ್ಟು ಮೊತ್ತದ ಹಣ ಲಭ್ಯವಿರದಿದ್ದ ಕಾರಣ ಅದೇ ದಿನ ದಿನಾಂಕ 13.01.2014 ರಂದು ನಾವು ವಾದಿಯಾದ ಕಾಳೇಗೌಡರಿಂದ 80,000/- ರೂಪಾಯಿ ಹಣವನ್ನು ಸಾಲವಾಗಿ ಪಡೆದು ಅವರಿಗೆ ಒಂದು ಪ್ರೊನೋಟ್ ಬರೆದುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ನಾವು ಕೇಳಿದ್ದ 1,60,000/- ರೂಪಾಯಿ ಹಣದ ಪೈಕಿ ದಿನಾಂಕ 13.01.2014

ರಂದು ವಾದಿಯಾದ ಕಾಳೇಗೌಡರು ನಮಗೆ 80,000/-ಹಣವನ್ನು ಸಾಲವಾಗಿ ಕೊಟ್ಟಿದ್ದು, ಇನ್ನುಳಿದ 80,000/- ರೂಪಾಯಿ ಹಣವನ್ನು ದಿನಾಂಕ 16.01.2014 ರಂದು ವಾದಿಯಾದ ಕಾಳೇಗೌಡರು ನಮಗೆ ಸಾಲವಾಗಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ದಿನಾಂಕ 16.01.2014 ರಂದು ವಾದಿಯಾದ ಕಾಳೇಗೌಡರಿಂದ ನಾವು ಇನ್ನುಳಿದ 80,000/- ರೂಪಾಯಿ ಹಣವನ್ನು ಸಾಲವಾಗಿ ಪಡೆದು ಅವರಿಗೆ ನಿಪಿ.3 ರ ಪ್ರೊನೋಟ್ ನ್ನು ಬರೆದುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 2011 ರಲ್ಲಿ ನಾವು ವಾದಿಯಾದ ಕಾಳೇಗೌಡರಿಂದ ಸಾಲವನ್ನು ಪಡೆದಿದ್ದು, ಅದನ್ನು ಮರುಪಾವತಿ ಮಾಡಿದ ನಂತರ ಸಲದ ಭದ್ರತೆಗಾಗಿ ನೀಡಿದ್ದ ಕ್ರಯದ ಕರಾರು ಪತ್ರದ ರದ್ದತಿ ಪತ್ರ ಮಾಡಿಸಿಕೊಳ್ಳಲು ಹೋದಾಗ ಕಾಳೇಗೌಡರು, ಅವರ ಮಗಳಾದ ಗಾಯತ್ರಿ ಹಾಗೂ ಕಾಳೇಗೌಡರ ಸಂಬಂಧಿಯಾದ ಶಶಿಕಲಾರವರು ಸೇರಿ ನಮ್ಮಿಂದ ನಾಲ್ಕು ಛಾಪಾ ಕಾಗದಗಳಲ್ಲಿ ಸಹಿಯನ್ನು ಪಡೆದಿದ್ದರು ಎಂದು ಸ್ವತಃ ನುಡಿದಿರುತ್ತಾರೆ.

7. ಶಶಿಕಲಾ ಎನ್ನುವವರು ಕಾಳೇಗೌಡರ ಸಂಬಂಧಿ ಎಂದು ತೋರಿಸಲು ನನ್ನ ಬಳಿ ಯಾವುದೇ ಪುರಾವೆಗಳಿಲ್ಲ. ಶಶಿಕಲಾ ಎನ್ನುವವರು ಕಾಳೇಗೌಡರ ಸಂಬಂಧಿ ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಶಶಿಕಲಾ ಎನ್ನುವವರು ಕಾಳೇಗೌಡರ ಸಂಬಂಧಿ ಎಂದು ತೋರಿಸಲು ಊರಿನವರನ್ನು ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿಸಲು ನನಗೆ ಸಾಧ್ಯವಿಲ್ಲ.

8. ಯಾವ ದಿನಾಂಕದಂದು ನೀವು ಶಶಿಕಲಾರವರಿಗೆ ಕ್ರಯದ ಕರಾರು ಪತ್ರವನ್ನು ಮಾಡಿ ಕೊಟ್ಟಿರುತ್ತೀರಿ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನಾವು ಶಶಿಕಲಾ ರವರಿಗೆ ಯಾವುದೆ ದಾಖಲೆಯನ್ನು ಬರೆದುಕೊಟ್ಟಿರುವುದಿಲ್ಲ ಹಾಗೂ ಶಶಿಕಲಾರವರು ಯಾವ ದಿನಾಂಕವನ್ನು ನಮೂದಿಸಿ ದಾಖಲೆಗಳನ್ನು ಸೃಷ್ಟಿಸಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದು ಸಾಕ್ಷಿಯು ನುಡಿದಿರುತ್ತಾರೆ.

9. ದಿನಾಂಕ 13.01.2014 ರಂದು ನಾವು ವಾದಿಯಾದ ಕಾಳೇಗೌಡರಿಗೆ ಬರೆದುಕೊಟ್ಟಿದ್ದ ಪ್ರೊನೋಟ್ ಸಂಬಂಧ ವಾದಿಯಾದ ಕಾಳೇಗೌಡರು ನಮ್ಮ ವಿರುದ್ಧ ಸಲ್ಲಿಸಿದ್ದ ಅಸಲು ದಾವೆ ಸಂಖ್ಯೆ 23/2017 ರ ದಾವೆಯು ಡಿಕ್ರಿಯಾಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅಸಲು ದಾವೆ ಸಂಖ್ಯೆ 23/2017 ರಲ್ಲಿ

ಹೊರಡಿಸಿದ ಆದೇಶದ ವಿರುದ್ಧ ನಾವು ಮೇಲ್ಮನವಿಯನ್ನು ಸಲ್ಲಿಸಿರುತ್ತೇವೆ ಎಂದು ಸ್ವತಃ ನುಡಿದಿರುತ್ತಾರೆ.

10. ನಾವು ವಾದಿಯಾದ ಕಾಳೇಗೌಡರಿಂದ ಸಾಲವನ್ನು ಪಡೆದ ರೀತಿಯಲ್ಲಿ ಹಲವಾರು ವ್ಯಕ್ತಿಗಳಿಂದ ಸಾಲವನ್ನು ಪಡೆದಿರುತ್ತೇವೆ ಎಂದರೆ ಸರಿಯಲ್ಲ. ನಿಮಗೆ ಸಾಲ ಕೊಟ್ಟಿದ್ದ ಸಾಲಗಾರರು ಇದೇ ನ್ಯಾಯಾಲಯದಲ್ಲಿ ಹಣ ವಸೂಲಿಗಾಗಿ ಹಲವಾರು ದಾವೆಗಳನ್ನು ನಿಮ್ಮ ವಿರುದ್ಧ ಹೂಡಿದ್ದರು ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನನ್ನ ಕಳೆದು ಹೋದ ಚೆಕ್ಕುಗಳನ್ನು ದುರುಪಯೋಗಪಡಿಸಿಕೊಂಡು ಅವರೆಲ್ಲಾ ನನ್ನ ವಿರುದ್ಧ ಸುಳ್ಳು ಚೆಕ್ ಬೌನ್ಸ್ ಪ್ರಕರಣಗಳನ್ನು ದಾಖಲಿಸಿದ್ದು, ಎಲ್ಲಾ ಪ್ರಕರಣಗಳಲ್ಲಿಯು ಸಹ ನನ್ನನ್ನು ನಿರಪರಾಧಿ ಎಂದು ನ್ಯಾಯಾಲಯವು ಆದೇಶಿಸಿರುತ್ತದೆ ಎಂದು ಸಾಕ್ಷಿಯು ನುಡಿದಿರುತ್ತಾರೆ.

**ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**